# ಬೀಜಕ್ಕಿಂತ ಮುಖ್ಯವಾದುದು ಮಣ್ಣು

## ಬೇರಾವುದೂ ಮಾಡದಿರುವನ್ನು ಶ್ರದ್ಧೆ ಮಾಡಬಲ್ಲುದು

ದಾಜಿ

ಪೂಜ್ಯ ಶ್ರೀ ಚಾರೀಜಿ ಮಹಾರಾಜರ
98ನ ಜಯಂತ್ಯೋತ್ಸವದಂದು ನೀಡಿದ ಸಂದೇಶ
ಜುಲೈ 24, 2025 ಕಾನ್ಹಾ ಶಾಂತಿವನಂ

# ಬೀಜಕ್ಕಿಂತ ಮುಖ್ಯವಾದುದು ಮಣ್ಣು

## ಬೇರಾವುದೂ ಮಾಡದಿರುವನ್ನು ಶ್ರದ್ಧೆ ಮಾಡಬಲ್ಲುದು

ಪ್ರಿಯ ಮಿತ್ರರೆ,

ಇಬ್ಬರು ವ್ಯಕ್ತಿಗಳು ಒಂದೇ ಧ್ಯಾನ ಮಂದಿರದಲ್ಲಿ ಕುಳಿತು, ಸಮಾನ ಪ್ರಾಣಾಹುತಿಯನ್ನು ಸ್ವೀಕರಿಸುತ್ತ, ಅದೇ ಶಬ್ದಗಳನ್ನು ಆಲಿಸುತ್ತ, ಅದೇ ಕ್ಷಣದಲ್ಲಿ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಾರೆಂದು ಕಲ್ಪಿಸಿಕೊಳ್ಳಿ. ಧ್ಯಾನದ ನಂತರ ಏಳುವ ಒಬ್ಬ ವ್ಯಕ್ತಿಯಲ್ಲಿ. ಮೊತ್ತಮೊದಲ ಬಾರಿ ದಿಕ್ಸೂಚಿಯು ಉತ್ತರ ದಿಕ್ಕನ್ನು ಕಂಡುಕೊಂಡ ರೀತಿಯಲ್ಲಿ, ಮೌನವಾಗಿ, ಮಾರ್ಪಡಿಸಲಾಗದಂತಹ ಏನೋ ಒಂದು ಪಲ್ಲಟವಾಗಿದೆ. ಮತ್ತೊಬ್ಬ ವ್ಯಕ್ತಿ ಏಳುತ್ತ, ಗಡಿಯಾರ ನೋಡಿ, ಉಳಿದವರೆಲ್ಲರಿಗೂ ಹೇಗನ್ನಿಸಿರಬಹುದೆಂದು ಅಚ್ಚರಿಗೊಳ್ಳುತ್ತಾನೆ. ಪ್ರಾಣಾಹುತಿ, ಮೌನ ಹಾಗು ಶಬ್ದಗಳು – ಇವೆಲ್ಲವೂ ಸಮಾನವಾಗಿದ್ದರೂ, ಅದೇನೋ ವ್ಯತ್ಯಾಸವಿರುತ್ತದೆ. ಹೀಗೇಕೆ? ಈ ಪ್ರಶ್ನೆಯನ್ನು ಹಾಗೆಯೆ ಉಳಿಸಿಕೊಂಡಿರಿ, ನಾವದಕ್ಕೆ ಪುನಃ ಮರಳೋಣ.

ಅದೇ ರೀತಿಯಾಗಿ, ಒಂದು ನೀರಿನ ಪಾತ್ರೆಯಲ್ಲಿ ಆಲೂಗಡ್ಡೆ ಮತ್ತು ಮೊಟ್ಟೆಯನ್ನು ಬೇಯಿಸುತ್ತಿದ್ದಾರೆ ಎಂದುಕೊಳ್ಳಿ. ನೀರು, ಶಾಖ ಮತ್ತು ಕುದಿಸಿದ ಸಮಯ ಎಲ್ಲವೂ ಒಂದೇ ಆಗಿದ್ದರೂ, ಆಲೂಗಡ್ಡೆ ಮೃದುವಾಗುತ್ತದೆ, ಆದರೆ ಮೊಟ್ಟೆ ಗಟ್ಟಿಯಾಗುತ್ತದೆ. ನಾವು ನಮ್ಮೊಳಗೆ ಏನನ್ನು ಇಟ್ಟುಕೊಂಡಿದ್ದೇವೆ ಎಂಬ ಅಂಶ, ನಮ್ಮ ಅನುಭವ ನಮ್ಮನ್ನು ಮತ್ತಷ್ಟು ಮುಕ್ತಗೊಳಿಸುತ್ತದೊ ಅಥವಾ ಮುಚ್ಚಿಕೊಳ್ಳುವಂತೆ ಮಾಡುತ್ತದೊ ಎನ್ನುವುದನ್ನು ನಿರ್ಧರಿಸುತ್ತದೆ. ಇದು ಪ್ರತಿಭೆಯದೊ, ಅರ್ಹತೆಯದೊ ಪ್ರಶ್ನೆಯಾಗಿರದೆ, ಮಣ್ಣಿನ ವಿಷಯವಾಗಿದೆ.

# ಅನುವಾದಿಸಲಾಗದ ಶಬ್ದ

ಹಿಂದಿನ ಸರಣಿ ಸಂದೇಶಗಳಲ್ಲಿ, ಸಾಧಕ ಹಾಗು ಭವಿಷ್ಯದ ಜೀವನದ ನಡುವೆ ನಿಲ್ಲುವ ಏಳು ಆಂತರಿಕ ತಡೆಗಳನ್ನು ನೋಡಿದೆವು. ಹೇಗೆ ಬಯಕೆ ವಿಭಜಿಸುತ್ತದೆ, ಆಲಸ್ಯ ಉಸಿರು ಕಟ್ಟಿಸುತ್ತದೆ, ಸಂಶಯ ಕೊರೆಯುತ್ತದೆ, ಗರ್ವ ಆವರಿಸಿಕೊಳ್ಳುತ್ತದೆ, ಮತ್ಸರ ಊನಗೊಳಿಸುತ್ತದೆ, ಪೂರ್ವಗ್ರಹ ಕಿಟಕಿಗಳನ್ನು ಮುಚ್ಚುತ್ತದೆ ಹಾಗು ಇವೆಲ್ಲವುಗಳ ಮೂಲವಾದ ಭಯವು ಬಾಗಿಲು ಮುಚ್ಚಿ ಒಳಗಿನಿಂದ ಬೀಗ ಹಾಕುತ್ತದೆ ಎನ್ನುವುದನ್ನು ನೋಡಿದೆವು. 'ಜೀವಿಸದ ಜೀವನ'ದಲ್ಲಿ ವಿಶ್ವಾಸವು ಬಾಗಿಲನ್ನು ತೆರೆಯುವ ಕೀಲಿಕೈಯಾಗಿದ್ದು, ಆಚೆ ಬದಿಯಲ್ಲಿ ನಾವು ಕಾಣುವುದು ಗಂತವ್ಯವಾಗಿರದೆ, ನೆಲದ ಗುಣವಾಗಿರುತ್ತದೆ ಎಂದು ಕಂಡುಕೊಂಡೆವು. ಪ್ರಾಚೀನರು ಅದನ್ನು ಶ್ರದ್ಧೆ ಎಂದು ಕರೆದಿದ್ದಾರೆ.

ಶ್ರದ್ಧೆಯ ಇಂಗ್ಲೀಷ್ ಅನುವಾದ 'ಫೇತ್' (faith) ಎಂದಾಗುತ್ತದೆಯಾದರೂ, ಅದು ಪೂರ್ಣ ಅರ್ಥ ನೀಡದು. ಸಾಬೀತು ಪಡಿಸಲಾಗದ್ದನ್ನು ನಂಬುವುದೆಂದರೆ ಫೇತ್ ಎಂದು ವಿವರಿಸಲಾಗುತ್ತದೆ, ಆದರೆ ಶ್ರದ್ಧೆ ಅದಕ್ಕಿಂತಲೂ ಎಷ್ಟೋ ಹೆಚ್ಚು ಜೀವಂತಿಕೆ ಉಳ್ಳದ್ದು. ಅದು ನಂಬಿಕೆ, ಆತ್ಮವಿಶ್ವಾಸ, ಪ್ರಾಮಾಣಿಕತೆ, ದೃಢತೆ, ನಿಷ್ಠೆ ಹಾಗು ಮನೋನಿಶ್ಚಯವನ್ನು ಒಂದೇ ಎರಕದಲ್ಲಿ ಹುಯ್ದಂತೆ. ಅದು, ಮನಸ್ಸು ಒಂದು ಪ್ರತಿಪಾದನೆಯನ್ನು ಒಪ್ಪುವುದಷ್ಟೇ ಅಲ್ಲ; ಬುದ್ಧಿಯು ಸಾಕ್ಷಿಯನ್ನು ತೂಗಿನೋಡುವ ಮುನ್ನವೆ, ನಮ್ಮ ಇಡೀ ಇರವು, ಹೃದಯದ ಸತ್ಯದೆಡೆಗೆ ವಾಲುವಂಥದ್ದು.

ತಿಳಿದವರು, ಗ್ರಂಥಗಳು ಹಾಗು ಗುರುವನ್ನು ನಂಬುವ ಮೂಲಕ ಸಂಭಾವ್ಯವಾದುದನ್ನು ಸಾಧಿಸುವುದನ್ನೇ ಶ್ರದ್ಧೆಯೆಂದು ವಿವರಿಸಿದ್ದಾರೆ. ಈಗ, 'ನಂಬಿಕೆ' ಎಂಬ ಪದದಲ್ಲಿ ಸೂಕ್ಷ್ಮತೆ ಅಡಗಿದೆ: ಅದು ವಿಷಯದ ನಿಷ್ಕ್ರಿಯ ಸ್ವೀಕಾರವಷ್ಟೇ ಅಲ್ಲ, ಅದು ಕೇವಲ ಮಾತಿಗೆ ಸೀಮಿತವಾಗದೆ, ಸ್ವತಃ ಅನುಭವಿಸಿದ ಸತ್ಯದೆಡೆಗೆ ನಮ್ಮೆಲ್ಲ ಸಾಮರ್ಥ್ಯಗಳ ಸಕ್ರಿಯ ಹೊಂದಾಣಿಕೆ.

ಆಂತರಿಕ ಅನುಭವಗಳ ಶ್ರೇಷ್ಠ ನಕ್ಷೆಗಾರ ಪತಂಜಲಿ ಋಷಿಯು, ಅತ್ಯುನ್ನತ ಸಾಕ್ಷಾತ್ಕಾರವನ್ನು ತಲುಪುವ ಐದು ಗುಣಗಳ ಸರಣಿಯಲ್ಲಿ ಶ್ರದ್ಧೆಯನ್ನು

ಮೊದಲ ಸ್ಥಾನದಲ್ಲಿರಿಸಿದ್ದಾನೆ. ಆ ಐದು ಗುಣಗಳೆಂದರೆ, ಶ್ರದ್ಧೆ, ವೀರ್ಯ (ಶಕ್ತಿ), ಸ್ಮೃತಿ (ಸ್ಮರಣೆ), ಸಮಾಧಿ (ತಲ್ಲೀನತೆ) ಹಾಗು ಪ್ರಜ್ಞೆ (ವಿವೇಕ). ಇದರ ಅನುಕ್ರಮವನ್ನು ಗಮನಿಸಿ: ಶ್ರದ್ಧೆಯು ಶಕ್ತಿ ಅಥವಾ ಇಚ್ಛೆಯನ್ನು ಪ್ರಯೋಗಿಸಲು ಇಂಧನವನ್ನೊದಗಿಸುತ್ತದೆ; ಶಕ್ತಿಯು ಸ್ಮರಣೆಯನ್ನು ಉಳಿಸಿಕೊಳ್ಳುತ್ತದೆ; ಸ್ಮರಣೆಯು ತಲ್ಲೀನತೆಯಾಗಿ ಪಕ್ವಗೊಳ್ಳುತ್ತದೆ; ಹಾಗು ತಲ್ಲೀನತೆಯು ವಿವೇಕವಾಗಿ ವಿಕಸಿತಗೊಳ್ಳುತ್ತದೆ. ಇಡೀ ಶೃಂಖಲೆಯು ಮೊದಲ ಸಂಪರ್ಕಕೊಂಡಿಯನ್ನು ಆಧರಿಸಿದೆ. ಶ್ರದ್ಧೆಯನ್ನು ತೆಗೆದುಬಿಟ್ಟರೆ ತಳವಿಲ್ಲದ ಏಣಿಯಂತೆ ಉಳಿದುವೆಲ್ಲ ನೆಲಸಮವಾಗುತ್ತವೆ.

## ನೀವು ನಿರೀಕ್ಷಿಸದ ಆತ್ಮವಿಶ್ವಾಸ

ನಾವು ಸಾಮಾನ್ಯವಾಗಿ ಶ್ರದ್ಧೆಯೆಂದರೆ ಭಗವಂತನಲ್ಲಿ, ಗುರುವಿನಲ್ಲಿ ಹಾಗು ನಮ್ಮ ಅಭ್ಯಾಸದ ಮೇಲಿನ ನಂಬಿಕೆಯೆಂದು ತಿಳಿದಿದ್ದೇವೆ. ಶ್ರದ್ಧೆಯಲ್ಲಿ ಅವೆಲ್ಲವೂ ಇವೆಯಾದರೂ, ಅದು ನಮ್ಮೊಂದಿಗೇ ಆರಂಭಗೊಳ್ಳುವುದು ಒಂದು ವಿಸ್ಮಯವೆ. ನಮ್ಮಲ್ಲಿ ಆತ್ಮವಿಶ್ವಾಸವಿಲ್ಲದಿದ್ದರೆ ನಂಬಿಕೆಯ ಅಭಾವವುಂಟಾಗುತ್ತದೆ. ಈ ಹಾದಿಯಲ್ಲಿ ನಡೆಯುವಂತೆ ನಮಗೆ ನಮ್ಮ ಸಾಮರ್ಥ್ಯದ ಮೇಲೆಯೆ ವಿಶ್ವಾಸವಿಲ್ಲದಿದ್ದರೆ, ಹಾದಿ ಅದೆಷ್ಟು ತೇಜೋಮಯವಾಗಿದ್ದರೂ ಪ್ರಯೋಜನವಿಲ್ಲ. ನಮ್ಮ ಆಯ್ಕೆ ಸೂಕ್ತವಾಗಿದೆಯೆಂದು ನಾವು ನಂಬದಿದ್ದರೆ, ಎಷ್ಟು ಪ್ರಮಾಣದ ಕೃಪೆಯೂ ಮನವೊಲಿಸಲಾರದು. ಸಂಶಯ ಮರಳುತ್ತಲೆ ಇರುತ್ತದೆ. ಅದಕ್ಕೆ ಕಾರಣ ನಮಗೆ ನಮ್ಮ ಗ್ರಹಿಕೆಯ ಮೇಲೆ ವಿಶ್ವಾಸವಿಲ್ಲವೆಂಬುದೇ ಹೊರತು, ನಮಗೆ ಅನುಭವ ಸಾಲದು ಎಂದಲ್ಲ.

ಶ್ರದ್ಧೆಯ ಇಂಗ್ಲೀಷ್ ಅನುವಾದ 'ಫೇತ್' (faith) ಎಂದಾಗುತ್ತದೆಯಾದರೂ, ಅದು ಪೂರ್ಣ ಅರ್ಥ ನೀಡದು. ಸಾಬೀತು ಪಡಿಸಲಾಗದ್ದನ್ನು ನಂಬುವುದೆಂದರೆ ಫೇತ್ ಎಂದು ವಿವರಿಸಲಾಗುತ್ತದೆ, ಆದರೆ ಶ್ರದ್ಧೆ ಅದಕ್ಕಿಂತಲೂ ಎಷ್ಟೋ ಹೆಚ್ಚು ಜೀವಂತಿಕೆ ಉಳ್ಳದ್ದು. ಅದು ನಂಬಿಕೆ, ಆತ್ಮವಿಶ್ವಾಸ, ಪ್ರಾಮಾಣಿಕತೆ, ದೃಢತೆ, ನಿಷ್ಠೆ ಹಾಗು ಮನೋನಿಶ್ಚಯವನ್ನು ಒಂದೇ ಎರಕದಲ್ಲಿ ಹುಯ್ದಂತೆ.

ಇದರರ್ಥವೇನೆಂದು ಆಲೋಚಿಸಿ. 'ದೃಢ ಬುನಾದಿಯ ನಿರ್ಮಾಣ'ದಲ್ಲಿ, ಹನ್ನೊಂದು ವರ್ಷ ಅಭ್ಯಾಸ ಮಾಡಿಯೂ, 'ಇದು ನಿಜವೆ' ಎಂದು ಪ್ರಶ್ನಿಸುವ ಮಹಿಳೆಯ ನೆನಪಿದೆಯೆ? ಆಕೆಯ ಅಭ್ಯಾಸ ಯಾವ ಕುಂದುಗಳಿಲ್ಲದೆ, ಆಕೆಯ ಪರಿವರ್ತನೆ ಸುತ್ತಲಿನ ಎಲ್ಲರಿಗೂ ಗೋಚರಿಸಿದರೂ, ಆಕೆಗೆ ನಂಬುಗೆಯಿರಲಿಲ್ಲ. ಏಕೆ? ಸಂಶಯವಿದ್ದುದು ಅಭ್ಯಾಸದ ಮೇಲಲ್ಲ, ಸ್ವತಃ ತನ್ನ ಮೇಲೆಯೆ. ಆಕೆಗೆ ಸ್ವತಃ ತನ್ನ ಪರಿವರ್ತನಾ ಸಾಮರ್ಥ್ಯದ ಮೇಲೆ ವಿಶ್ವಾಸವಿರಲಿಲ್ಲ. ಆಕೆ ಕುದಿಯುವ ನೀರಿನಲ್ಲಿನ ಮೊಟ್ಟೆಯಂತೆ; ಆಕೆಯನ್ನು ಮೆದುಗೊಳಿಸಬೇಕಾದ ಅನುಭವವೇ ಗಡಸುಗೊಳಿಸಿತು. ಆ ಪ್ರಶ್ನೆ ಏಳುವ ಮುನ್ನವೇ ಶ್ರದ್ಧೆ ಅದನ್ನು ಪರಿಹರಿಸಬಹುದಿತ್ತು; ಇಲ್ಲಿ ಸಂಶಯದೊಂದಿಗೆ ವಾದಿಸುವ ಅಗತ್ಯವಿಲ್ಲ, ಸಂಶಯ ನುಸುಳಲು ಆಸ್ಪದವೇ ನೀಡದಂತೆ ಸುಭದ್ರ ನೆಲವನ್ನು ಅಣಿಗೊಳಿಸಿದರೆ ಸಾಕು.

ಇದು, ನಾವು ಕೇಳಿಸಿಕೊಳ್ಳಲೇ ಬೇಕಾದ ಶ್ರದ್ಧೆಯ ಆಯಾಮ: ದೈವೇಚ್ಛೆಗೆ ಶರಣಾಗತಿ ಎಷ್ಟು ಮುಖ್ಯವೊ, ಆಧ್ಯಾತ್ಮಿಕತೆಗೆ ಶ್ರದ್ಧೆ ಅಷ್ಟೇ ಆವಶ್ಯಕ. ಅವೆರಡಕ್ಕೂ ವಿರೋಧವಿಲ್ಲ; ಅವು ವಿಭಿನ್ನ ದೃಷ್ಟಿಕೋನಗಳಿಂದ ಕಾಣುವ ಒಂದೇ ಚಲನೆಯಾಗಿವೆ. ಬಿಟ್ಟುಕೊಡುವಂತೆ ನಿಮ್ಮ ಮೇಲೆ ನಿಮಗೆ ವಿಶ್ವಾಸವಿದ್ದರೆ, ಅದೇ ಶರಣಾಗತಿ. ನೀವು ಅದರ ಕೃಪೆಗೆ ಅರ್ಹರೆಂದು ನಂಬುವಷ್ಟು ನಿಮಗೆ ದೈವಿಕತೆಯ ಮೇಲೆ ವಿಶ್ವಾಸವಿದ್ದರೆ, ಅದು ಆತ್ಮವಿಶ್ವಾಸ. ಶ್ರದ್ಧೆ ಅವೆರಡನ್ನೂ ಒಂದೇ ಕೈಯಲ್ಲಿ ಹಿಡಿದಿಡುತ್ತದೆ.

## ಮಣ್ಣಿನಲ್ಲಿ ಬೆಳೆಯುವುದು ಯಾವುದು ?

ಬೀಜ ತಾನು ಬೀಳುವ ಮಣ್ಣನ್ನು ಆಯ್ದುಕೊಳ್ಳದು, ಆದರೆ ಸಾಧಕನಿಗೆ ಆ ಆಯ್ಕೆಯಿದೆ. ಆತ ಸಿದ್ಧಗೊಳಿಸುವ ನೆಲವು ಮುಂದಿನದೆಲ್ಲವನ್ನೂ ನಿರ್ಧರಿಸುತ್ತದೆ. ಎಲ್ಲಿ ನಿಜವಾದ ದೃಢ ವಿಶ್ವಾಸವಿರುವುದಿಲ್ಲವೊ, ಅಲ್ಲಿ ನಿಜವಾದ ಪ್ರೇಮವಿರದು, ಜೊತೆಗೆ ನಿಜವಾದ ಶರಣಾಗತಿಯೂ ಇರದು; ಎಲ್ಲಿ ನಿಜವಾದ ದೃಢವಿಶ್ವಾಸವಿರುವುದೊ, ಆತ್ಮದ ಸಜೀವ ಸಂರಚನೆ ಅನಾವರಣಗೊಳ್ಳುತ್ತದೆ:

ಶ್ರದ್ಧೆಯು ಪ್ರೇಮ ಬೆಳೆಯುವ ನೆಲ.
ಭಕ್ತಿ ತನ್ನ ದಿಕ್ಕನ್ನು ಕಂಡುಕೊಂಡ ಪ್ರೇಮಭಾವ.
ಶರಣಾಗತಿಯು ಫಲದ ಮೇಲಿನ ಹಿಡಿತವನ್ನು ಮುಕ್ತಗೊಳಿಸಿದ ಭಕ್ತಿ.

ಲಯಾವಸ್ಥೆಯೆಂದರೆ, ಶರಣಾಗತಿಯನ್ನೂ ಸಮರ್ಪಿಸಿದರೆ ಏನು ಉಳಿಯುತ್ತದೋ, ಅದು.

ಈ ಅನುಕ್ರಮವನ್ನು ಮತ್ತೊಮ್ಮೆ, ನಿಧಾನವಾಗಿ ನೋಡೋಣ:

ಶ್ರದ್ಧೆಯು ಪ್ರೇಮಕ್ಕೆ ಎಡೆಮಾಡಿಕೊಡುತ್ತದೆ.
ಪ್ರೇಮ ಭಕ್ತಿಯನ್ನು ತರುತ್ತದೆ.
ಭಕ್ತಿ ಶರಣಾಗತಿಯನ್ನು ಸಾಧ್ಯವಾಗಿಸುತ್ತದೆ.
ಶರಣಾಗತಿ ಲಯಾವಸ್ಥೆಯೆಡೆಗೆ ಕರೆದೊಯ್ಯುತ್ತದೆ.

ಮೊಗ್ಗು ಹೂವಾಗಿ, ಹೂವು ಕಾಯಿಯಾಗುವಂತೆ, ಪ್ರತಿಯೊಂದೂ ಸಹಜವಾಗಿ ಹಿಂದಿನದಕ್ಕಿಂತ ಪಕ್ವವಾಗುತ್ತದೆ. ಮೊಗ್ಗನ್ನು ಬಲವಂತವಾಗಿ ಕಾಯಿಯಾಗುವಂತೆ ಮಾಡಲಾಗದಿದ್ದರೂ, ನೆಲವನ್ನು ಹದಗೊಳಿಸಿ, ಸೂರ್ಯ ತನ್ನ ಕೆಲಸ ಮಾಡಲು ಬಿಡಿ.

ಈ ಹೊಸ ಸರಣಿಯಿಡೀ ನಮ್ಮನ್ನು ವ್ಯಾಪಿಸಿಕೊಳ್ಳುವ ಸತ್ಯ ಹೀಗಿದೆ: ಲಯಾವಸ್ಥೆ ಸಂಭವಿಸಿದಾಗ, ನಿಜವಾದ ಯಾತ್ರೆ ಆರಂಭಗೊಳ್ಳುತ್ತದೆ. ಈ ವಾಕ್ಯದ ಮೇಲೆ ಮೌನವಾಗಿ ಕೊಂಚ ಸಮಯ ವಿನಿಯೋಗಿಸಿರಿ. ಬಹುತೇಕ ಎಲ್ಲ ಆಧ್ಯಾತ್ಮಿಕ ಸಂಪ್ರದಾಯಗಳು ಹಾಗು ಬೋಧನೆಗಳೂ ಐಕ್ಯವೇ ಗುರಿಯೆಂದು ಹೇಳುತ್ತವೆ. ಆದರೆ ಗುರಿ ಮುಟ್ಟಿದ ಅನುಭಾವಿಗಳು ಇನ್ನೂ ಹೆಚ್ಚಿನದನ್ನು ಹೇಳುತ್ತಾರೆ: ಶೃಂಗವೇ ಗುರಿಯಲ್ಲ, ಅದು ದ್ವಾರವಷ್ಟೆ. ನೀವು ಅನ್ವೇಷಿಸುತ್ತಿದ್ದೀರೆಂದು ತಿಳಿದ ಜೀವನವು,



ಶ್ರದ್ಧೆಯು ಪ್ರೇಮ ಬೆಳೆಯುವ ನೆಲ.
ಭಕ್ತಿ ತನ್ನ ದಿಕ್ಕನ್ನು ಕಂಡುಕೊಂಡ ಪ್ರೇಮಭಾವ.
ಶರಣಾಗತಿಯು ಫಲದ ಮೇಲಿನ ಹಿಡಿತವನ್ನು ಮುಕ್ತಗೊಳಿಸಿದ ಭಕ್ತಿ.
ಲಯಾವಸ್ಥೆಯೆಂದರೆ, ಶರಣಾಗತಿಯನ್ನೂ ಸಮರ್ಪಿಸಿದರೆ ಏನು ಉಳಿಯುತ್ತದೋ, ಅದು.

ಮತ್ತೊಂದು ಬದಿಯ ಜೀವನಕ್ಕಾಗಿ ಮಾಡುವ ಸಿದ್ಧತೆ ಮಾತ್ರ; ಅಂತೆಯೆ ಆ ಸಿದ್ಧತೆಯು ಮಣ್ಣಿನ ಗುಣಮಟ್ಟದಿಂದ ಆರಂಭವಾಗುತ್ತದೆ.

## ಸಪ್ಪೆಯೂ ಅಲ್ಲ, ಕುರುಡೂ ಅಲ್ಲ

ಪಿಸುಮಾತಿನ ಸೂಚನೆಯೊಂದು ಮೆಲ್ಲನೆಯ ಆರ್ಭಟವನ್ನು ತರುತ್ತದೆ: ವಿಶ್ವಾಸ ಸಪ್ಪೆಯಾಗಿರಲು ಸಾಧ್ಯವಿಲ್ಲ. ನಿಮ್ಮ ವಿಶ್ವಾಸ ಉತ್ಸಾಹರಹಿತವಾಗಿದ್ದರೆ, ನಿಮ್ಮ ಉದ್ದೇಶಗಳನ್ನು ಪರ್ಯಾಲೋಚಿಸಿ, ಅವುಗಳನ್ನು ಕೈಗೊಳ್ಳಿರಿ. ಶ್ರದ್ಧೆ ಅತ್ಯುತ್ಸಾಹಿ ಮತ್ತು ದೃಢನಿಶ್ಚಯವುಳ್ಳದ್ದು. ಅದು, ಯಾವ ಗಾಳಿಯೂ ನಂದಿಸಲಾಗದ ತೀವ್ರತೆಯಿಂದ ಉರಿಯುವ ದೀಪದಂತೆ; ಅದಕ್ಕೆ ಕಾರಣ ತೈಲ ಆಳದವರೆಗೂ ಇರುವುದೆಂದೇ ಹೊರತು ಜ್ವಾಲೆ ಉಗ್ರವೆಂದಲ್ಲ.

ವಿಶ್ವಾಸ ಕುರುಡೂ ಅಲ್ಲ. ಅದು, ನಿಮ್ಮ ಆಂತರಿಕ ಲೋಕವನ್ನು ಪಲ್ಲಟಗೊಳಿಸುವ ಯಾವುದೋ ಅಂಶವನ್ನು ಎದುರಿಸುವುದರಿಂದ ಹುಟ್ಟುತ್ತದೆ. ಯಾರೂ ಸೂಕ್ಷ್ಮವಾಗಿ ಪರಿಶೀಲಿಸದ, ವಂಶಪಾರಂಪರ್ಯವಾಗಿ ಪಡೆದ ನಂಬಿಕೆ ಮಾತ್ರದಿಂದ ವಿಶ್ವಾಸವನ್ನು ಪ್ರತ್ಯೇಕಗೊಳಿಸುವುದು ಇದೇ. ನಿಮ್ಮ ತಂದೆತಾಯಿಯರು ನಂಬುತ್ತಾರೆಂದು ಅಥವಾ ನಿಮ್ಮ ಸಮುದಾಯ ನಂಬುತ್ತದೆಂದು ನೀವು ನಂಬಬಹುದು, ಏಕೆಂದರೆ ಪ್ರಶ್ನಿಸುವುದಕ್ಕಿಂತ ನಂಬುವುದು ಸುಲಭ. ಆದರೆ ಶ್ರದ್ಧೆಯಲ್ಲಿ ಹಾಗಾಗದು, ಅದು ನೇರವಾದುದು. ನೀವು ಧ್ಯಾನಕ್ಕೆ ಕುಳಿತು, ವಿಚಾರವು ಉತ್ಪತ್ತಿ ಮಾಡಲಾಗದ, ನೆನಪು ರೂಪಿಸಲಾಗದ ಉಪಸ್ಥಿತಿಯನ್ನು ನಿಸ್ಸಂಶಯವಾಗಿ ಅನುಭವಿಸಿದಾಗ, ಶ್ರದ್ಧೆ ನಿಮ್ಮಲ್ಲಿ ಬೆಳೆಯಲಾರಂಭಿಸುತ್ತದೆ. ನಿಮ್ಮದೇ ಹೃದಯ ಅದಕ್ಕೆ ಸಾಕ್ಷಿಯಾಗಿದೆ.

ಆದ್ದರಿಂದಲೆ ಹಾರ್ಟ್‌ಫುಲ್‌ನೆಸ್ ಮಾರ್ಗದಲ್ಲಿ ಧ್ಯಾನವು ವಿಧಾನ ಮಾತ್ರವಲ್ಲ; ಅದು ಶ್ರದ್ಧೆ ರೂಪುಗೊಳ್ಳುವ ಪ್ರಯೋಗಶಾಲೆ. ಸತ್ಯವಾದ ಯಾವುದೊ ಒಂದಕ್ಕೆ ಗವಾಕ್ಷಿ ತೆರೆಯುವ ಪ್ರತಿಯೊಂದು ಧ್ಯಾನವೂ, ನಿಮ್ಮ ಪದತಲದ ನೆಲಕ್ಕೆ ಒಂದು ಪದರವನ್ನು ಸೇರಿಸುತ್ತದೆ. ಕಾಲಕ್ರಮೇಣ, ಆ ನೆಲ ಅದೆಷ್ಟು ಭದ್ರವಾಗುತ್ತದೆಂದರೆ, ಎಂದಿನಂತೆ ಸಂಶಯವು ಬಾಗಿಲು ಬಡಿದಾಗ, ನಿಮ್ಮ ಮನೆ ಅಲ್ಲಾಡದು. ನೀವು ಪ್ರತಿ ಪ್ರಶ್ನೆಯನ್ನೂ ಉತ್ತರಿಸಿದಿರೆಂದಲ್ಲ; ಬದಲಾಗಿ, ಪ್ರಶ್ನೆಗಳು ತಲುಪಲಾರದ ನೆಲದ ಮೇಲೆ ನೀವು ನಿಂತಿರುತ್ತೀರಿ.

## ಅದನ್ನು ಪ್ರಮಾಣೀಕರಿಸಿದ ಜೀವನ

ಇಂದು, ನಾವು ಚಾರೀಜಿ ಮಹಾರಾಜರ ಜನ್ಮದಿನದ 99 ವರ್ಷಗಳನ್ನು ಆಚರಿಸುತ್ತಿರುವಂತೆಯೆ, ಈ ಸಂದೇಶ ವಿವರಿಸುವ ಎಲ್ಲವನ್ನೂ ಪರ್ಯಾಲೋಚಿಸಲು ಸಮಯ ನೀಡುವುದೊಳಿತು. ವಿಜ್ಞಾನದಲ್ಲಿ ತರಬೇತುಗೊಂಡ, ಉದ್ಯಮದಲ್ಲಿ ನಿಪುಣರಾದ ಅವರ ಮನಸ್ಸು ಕೂಲಂಕಷ ತನಿಖೆಗಾಗಿ ನಿರ್ಮಿತವಾಗಿದ್ದರೂ, ತಮ್ಮ ಗುರುಗಳನ್ನು ಭೇಟಿಯಾದ ನಂತರ ಅವರು ಕಿಂಚಿತ್ತೂ ಕುರುಡಲ್ಲದ ವಿಶ್ವಾಸವನ್ನು ಅರ್ಪಿಸಿದರು; ಏಕೆಂದರೆ ಪ್ರತಿಯೊಂದು ದಿನವೂ ಅವರದನ್ನು ತಮ್ಮ ಹೃದಯವೆಂಬ ಪ್ರಯೋಗಶಾಲೆಯಲ್ಲಿ ಪರೀಕ್ಷಿಸಿದ್ದರು. ಅದು ಎಂದಿಗೂ ಸಪ್ಪೆಯಾಗಿರಲಿಲ್ಲ, ಏಕೆಂದರೆ ಅದು ಅವರ ಸಂಪೂರ್ಣ ಜೀವನವನ್ನು ಆವರಿಸಿತ್ತು. ಅವರ ಹೃದಯ ಸಿದ್ಧಗೊಂಡ ಕ್ಷೇತ್ರವಾಗಿತ್ತು. ಪ್ರಾಣಾಹುತಿ ಅದರ ಮೇಲೆ ಬಿದ್ದಾಗ, ಆ ಬೆಳೆ ಸಮಸ್ತ ಪ್ರಪಂಚದ ಸಾಧಕರಿಗೆ ಉಣಿಸಿತ್ತು; ಈಗಲೂ ಉಣಿಸುತ್ತಿದೆ. ತಮ್ಮ ವಿಶ್ವಾಸವನ್ನು ಮೆಚ್ಚುವಂತೆ ಅವರು ನಮ್ಮನ್ನು ಕೇಳದೆ, ನಮ್ಮದೇ ವಿಶ್ವಾಸವನ್ನು ಬೆಳೆಸಿಕೊಳ್ಳುವಂತೆ ಹೇಳಿದರು. ನಾವು ಅವರಿಗೆ ಅರ್ಪಿಸಬಹುದಾದ ಅತ್ಯುತ್ತಮ ಶ್ರದ್ಧಾಂಜಲಿಯೆಂದರೆ, ಅದು ಸಿದ್ಧವಾದ ಹೃದಯ.

## ಧ್ಯಾನಮಂದಿರದ ಇಬ್ಬರು ವ್ಯಕ್ತಿಗಳು

ಧ್ಯಾನ ಮಾಡುತ್ತಿದ್ದ ಆ ಇಬ್ಬರ ವಿಷಯಕ್ಕೆ ಮರಳೋಣ ಹಾಗು ಯಾರೊಂದಿಗೆ ಆರಂಭಿಸುವುದೆಂದು ನೋಡೋಣ. ಭಿನ್ನವಾಗಿದ್ದುದೇನು? ಮಣ್ಣು. ಒಂದು ಹೃದಯ ಸಿದ್ಧವಾಗಿತ್ತು, ಪರಿಪೂರ್ಣ ಅಥವಾ ಸಂಪೂರ್ಣವೆಂದೇನಲ್ಲ, ಆದರೆ ಅದರಲ್ಲಿ ಇಚ್ಛೆಯಿತ್ತು, ನಿಜವಾದುದೇನೋ ಆಗಬಹುದೆಂಬ ಮೌನ ನಿಶ್ಚಯ, ತನ್ನ ಸ್ವೀಕರಿಸುವ ಸಾಮರ್ಥ್ಯದ ಮೇಲೆ ನಂಬಿಕೆಯಿತ್ತು. ಆ ಇಚ್ಛೆ ಪ್ರತಿಭೆಯೊ, ಅದೃಷ್ಟವೊ ಅಲ್ಲ, ಅದು ಶ್ರದ್ಧೆ. ಕುದಿಯುವ ನೀರಿನಲ್ಲಿನ ಆಲೂಗಡ್ಡೆಯಂತೆ, ಪ್ರಾಣಾಹುತಿಯ ಉಷ್ಣದಿಂದ ಹೃದಯ ಮೆದುವಾಗಿ, ನೀಡಲಾದ ಎಲ್ಲದಕ್ಕೂ ಮತ್ತಷ್ಟು ಮುಕ್ತವಾಯಿತು. ಈ ಗುಣವನ್ನು ಬೆಳೆಸಿಕೊಳ್ಳಲಿಚ್ಛಿಸುವ ಎಲ್ಲರೂ ಅದನ್ನು ಬೆಳೆಸಿಕೊಳ್ಳಲು ಸಾಧ್ಯವಿದೆ.

ಮತ್ತೊಂದು ಹೃದಯ ಬಂಜರಾಗಿರಲಿಲ್ಲ. ಯಾವ ಹೃದಯವೂ ಎಂದಿಗೂ ಬಂಜರಾಗಿರಲು ಸಾಧ್ಯವಿಲ್ಲವೆಂದು ಇಲ್ಲಿ ಸ್ಪಷ್ಟಗೊಳಿಸೋಣ. ಅದು ಕೇವಲ ಸಿದ್ಧವಾಗಿರಲಿಲ್ಲ, ಪ್ರಾಯಶಃ ಚಂಚಲವಾಗಿತ್ತು, ಎಚ್ಚರಿಕೆಯಿಂದಿತ್ತು ಅಥವಾ 'ಹೆಚ್ಚೇನೂ ಆಶಿಸಬೇಡ' ಎಂದುಸುರುವ ಹಳೆಯ ನಿರಾಶೆಯ ಶೇಷವೊಂದನ್ನು ಹೊತ್ತಿತ್ತು. ಆ ಪಿಸುಮಾತು ಪರಿಚಿತವೆ? ನಾವು ಎಂಟು ಸಂದೇಶಗಳಲ್ಲಿ ಕರಗಿಸಿದ ಅದೇ ಭಯದ ಕೊನೆಯ ಪ್ರತಿಧ್ವನಿ. ಅದಕ್ಕೆ ಪ್ರತ್ಯೌಷಧ ಮೊದಲಿದ್ದುದೇ; ಅದು ಬೃಹತ್ ಕಾರ್ಯವಲ್ಲ, ಕೇವಲ ಪುಟ್ಟ, ಬದಲಿಸಲಾರದ ಹೆಜ್ಜೆ. ಹಾಗಾಗಿ, ನಾಳೆ ಪುನಃ ಕೊಂಚ ಹೆಚ್ಚು ಮುಕ್ತತೆಯಿಂದ ಧ್ಯಾನಮಾಡಿ. ಹೃದಯ ಸ್ವಲ್ಪ ಕಡಿಮೆ ರಕ್ಷಣಾತ್ಮಕವಾಗಿರಲಿ. ಆ ಲವಲೇಶವಷ್ಟೆ ಸಾಕು. ಶ್ರದ್ಧೆ ಪೂರ್ಣ ರೂಪುಗೊಂಡು ಬರುವುದಿಲ್ಲ; ಪ್ರತಿಯೊಂದು ಋತುವಿನಲ್ಲಿ ಮಣ್ಣು ಆಳವಾದಂತೆ, ಧ್ಯಾನದಿಂದ ಧ್ಯಾನಕ್ಕೆ, ಪ್ರತಿಯೊಂದು ವಿಶ್ವಾಸ ತುಂಬಿದ ಕಾರ್ಯದೊಂದಿಗೆ ಅದು ಬೆಳೆಯುತ್ತ ಹೋಗುತ್ತದೆ.

ನಾವೆಲ್ಲರೂ, ಭರವಸೆಯ ಅಗತ್ಯವಿರುವ ಮಕ್ಕಳಂತೆ, ಯುಗಯುಗಾಂತರಗಳಿಂದಲೂ ಹಸ್ತಾಂತರಗೊಂಡ, ಆಳವಾಗಿ ಬೇರೂರಿದ ಭಯಗಳನ್ನು ಹೊತ್ತಿದ್ದೇವೆ. ಶ್ರದ್ಧೆ, ಆತ್ಮವು ತನಗೆ ತಾನೇ ಕೊಟ್ಟುಕೊಳ್ಳುವ ಭರವಸೆ. ಅದು, ಮಗುವೊಂದು ಅನುಮತಿಗಾಗಿ ಹೊರಗೆ ನೋಡುವುದನ್ನು ನಿಲ್ಲಿಸಿ, ನಂಬಿಕೆಗಾಗಿ ಕಾಯುತ್ತಿದ್ದ, ಎಂದಿನಿಂದಲೂ ತನ್ನ ಕಾಲಿನ ಕೆಳಗೆಯೆ ಇದ್ದ ಸುದೃಢ ನೆಲವನ್ನು ಕಂಡುಕೊಂಡ ಕ್ಷಣ.

ನೆಲವನ್ನು ಹದಗೊಳಿಸಿರಿ, ಆಗ ಬೀಜಕ್ಕೆ ತಾನೇನಾಗಬೇಕೆಂದು ಈಗಾಗಲೇ ತಿಳಿದಿದೆಯೆಂದು ಕಂಡುಕೊಳ್ಳುವಿರಿ.

ಪ್ರೇಮ ಮತ್ತು ಪ್ರಾರ್ಥನೆಗಳೊಂದಿಗೆ,
ಕಮಲೇಶ್

ಪೂಜ್ಯ ಶ್ರೀ ದಾಜಿಯವರ ಮಹಾರಾಜರ

98ನ ಜಯಂತ್ಯೋತ್ಸವದಂದು ನೀಡಿದ ಸಂದೇಶ, ಜುಲೈ 24, 2025 ಕಾನ್ಹಾ ಶಾಂತಿವನಂ

*There's More Waiting For You*

to go a little deeper

## HEARTFULNESS APP

### A Quiet Place to Start

Carry your practice with you — download the free app and connect with a personal trainer anytime.

Free Download. Daily practice. Trainer always Available.

Heartfulnessapp.org

## MASTERCLASSES

### Go Deeper at Home

Learn with Daaji relaxation, meditation, cleaning, and prayer through three freely offered video sessions.

Free Videos. Learn from Daaji. 3 Classes.

Heartfulness.org/global/masterclass

## RETREAT

### Time for Just You

Step away from the noise and into a peaceful weekend that quietly deepens everything.

Peaceful Setting. Deepen Practice. Weekend Stays.

Heartfulness.org/global/retreat

## HEARTSPOTS

### Find a Centre Near You

Your nearest meditation centre is closer than you think at no cost.

6000+ Centres. Heartful Community. Free to Visit.

Heartspots.heartfulness.org

Scan to download the free app, always there when you need it.
Start with a guided session, and let the practice find its own rhythm in you.
The journey inward begins with a single, still moment.

heartfulness
purity weaves destiny